# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.69/2021

C.W.5
P.W. 4

<u>ದಿನಾಂಕಃ 06-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ ಎಂ ವಿ ಮಂಜುನಾಥ್ |
| ತಂದೆಯ ಹೆಸರು | ಃ ಎಂ .ವಿಜಯನ್ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಮುಖ್ಯಪೇದೆ -76 |
| ವಾಸ | ಃ ಕ್ಯಾತ್ಸಂದ್ರ ಪೊಲೀಸ್ ಠಾಣೆ , ತುಮಕೂರು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನಾನು 2014 ರಿಂದ 2021 ರವರಿಗೆ ತಿಲಕ್ ಪಾರ್ಕ್ ಪೊಲೀಸ್ ಠಾಣೆಯ ಜೀಪ್ ಚಾಲಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಸದರಿ ಜೀಪ್ ನ ಸಂಖ್ಯೆ -ಕೆಎ-64- ಜಿ-0333 ಆಗಿರುತ್ತದೆ .

2) ದಿ 06-12-2020 ರಂದು ಬೆಳಗ್ಗೆ 5 ಗಂಟೆ ಸುಮಾರಿಗೆ ಆರೋಪಿತನು ಅಜ್ಜಪ್ಪನಹಳ್ಳಿಯಲ್ಲಿ ಇರುವುದಾಗಿ ನಮ್ಮ ಪಿ ಎಸ್ ಐ ರವರಿಗೆ ಮಾಹಿತಿ ಬಂದಿತು, ನಂತರ ಪಿ ಎಸ್ ಐ ರವ ರು ಕೂಡಲೇ ಪೊಲೀಸ್ ಠಾಣೆಗೆ ಬಾ ಎಂದು ಹೇಳಿದ ನಂತರ ನಾನು ಠಾಣೆಗೆ ಬಂದೆನು. ನಂತರ ಪಿ ಎಸ್ ಐ ರವರ ಜೀಪಿನಲ್ಲಿ ನಾನು

ಚಾಲಕನಾಗಿ , ಪಿ ಎಸ್ ಐ ರವರು, ಚಾಸಾ-2 ರಿಂದ 4 ರವರ ಜೊತೆ ಬೆಳಗ್ಗೆ 5 ರಿಂದ 5.15 ಗಂಟೆ ಅವಧಿಯಲ್ಲಿ ಠಾಣೆಯನ್ನು ಬಿಟ್ಟು ಮಾಹಿತಿ ಬಂದಂತಹ ಅಜ್ಜಪ್ಪನಹಳ್ಳಿಗೆ ಹೋಗಿ ಅಲ್ಲಿ ಸ್ವಲ್ಪ ದೂರದಲ್ಲಿ ಇದ್ದಂತಹ ಅಂಜನೇಯ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಜೀಪ್ ನ್ನು ನಿಲ್ಲಿಸಿದೆ. ನಾನು ಆಗ ಜೀಪ್ ನಲ್ಲಿ ಕುಳಿತುಕೊಂಡಿದ್ದು, ಪಿ ಎಸ್ ಐ ಮತ್ತು ಸಿಬ್ಬಂದಿಗಳು ಆರೋಪಿ ಇದ್ದ ಮಾಹಿತಿ ಜಾಗಕ್ಕೆ ಹೋದರು. ಸ್ವಲ್ಪ ಸಮಯದ ನಂತರ ಗುಂಡು ಹಾರಿಸುವ ಶಬ್ದ ಕೇಳಿಸಿತು. ಪುನಃ 2-3 ನಿಮಿಷಗಳ ನಂತರ ಮತ್ತೊಂದು ಗುಂಡು ಹಾರಿಸುವ ಶಬ್ದ ಕೇಳಿಸಿತು. ಆಗ ನನಗೆ ಚಾಸಾ-1 ರವರು ವೈರ್ ಲೆಸ್ ಮೂಲಕ ನನಗೆ ಮಾಹಿತಿ ನೀಡಿ ತಕ್ಷಣವೇ ಜೀಪ್ ನ್ನು ತೆಗೆದುಕೊಂಡು ಬರಲು ತಿಳಿಸಿದರು.ನಾನು ತಕ್ಷಣ ಮಾವಿನ ತೋಪಿನ ಹತ್ತಿರ ಜೀಪ್ ನ್ನು ತೆಗೆದುಕೊಂಡು ಹೋದೆ. ಆಗ ಸ್ಥಳಕ್ಕೆ ಹೋಗಿ ನೋಡಲಾಗಿ ಚಾಸಾ-2 ಪರಮೇಶ್ವರಯ್ಯ ಇವರಿಗೆ ಎಡಗೈ ತೋಳಿನಲ್ಲಿ ರಕ್ತಸ್ರಾವವಾಗುತ್ತಿತ್ತು , ಆರೋಪಿ ವಿಕಾಸ್ ಇತನ ಕಾಲಿಗೆ ರಕ್ತಸ್ರಾವವಾಗಿತ್ತು. ಆಗ ಪಿ ಎಸ್ ಐ ರವರು ಆರೋಪಿತನನ್ನು ದಸ್ತಗಿರಿ ಮಾಡಲು ಹೋದಾಗ ನನ್ನ ಮೇಲೆ ಹಲ್ಲೆ ಮಾಡಿದ್ದು, ನಂತರ ರಕ್ಷಣೆಗಾಗಿ ಆರೋಪಿತನ ಮೇಲೆ ಗುಂಡು ಹಾರಿಸಿದ್ದು ಪೊಲೀಸ್ ಸಿಬ್ಬಂದಿ ಮತ್ತು ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ನಮ್ಮ ಜೀಪ್ ನಲ್ಲಿ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಬರುತ್ತಿರುವಾಗ, ಯಲ್ಲಾಪುರದ ಹತ್ತಿರ ಎದುರುಗಡೆಯಿಂದ ತಿಲಕ್ ಪಾರ್ಕ್ ವೃತ್ತದ ಸಿಪಿಐ ರವರು ತಮ್ಮ ಜೀಪ್ ನಲ್ಲಿ ಬರುತ್ತಿದ್ದರು. ಆಗ ಚಾಸಾ-1 ರವರು ಘಟನೆಯ ಕುರಿತು ಸಿ ಪಿ ಐ ರವರಿಗೆ ಮಾಹಿತಿ ನೀಡಿ ತಮ್ಮ ಜೀಪ್ ನಲ್ಲಿ ಕುಳಿತಿದ್ದ ಗಾಯಳು ಪರಮೇಶ್ವರಯ್ಯ ಇವರನ್ನು

ಸಿ ಪಿಐ ರವರ ಜೀಪ್ ನಲ್ಲಿ ಕುರಿಸಿ , ಅವರು ಮುಂದೆ ,ತಾನು ಹಿಂದೆ ಜೀಪ್ ನ್ನು ಚಲಾಯಿಸಿಕೊಂಡು ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ.

3) ಆರೋಪಿ ವಿಕಾಸ್ ಇತನು ರೌಡಿಶೀಟರ್ ಹಿನ್ನೇಲೆಯನ್ನು ಉಳ್ಳವನಾಗಿರುತ್ತಾನೆ . ಆರೋಪಿ ವಿಕಾಸ್ ನು ದಸ್ತಗಿರಿ ಮಾಡಲು ಹೋದ ಪ್ರಕರಣ ಕೊಲೆ ಪ್ರಕರಣವಾಗಿರುತ್ತದೆ. ಸದರಿ ಕೊಲೆ ಪ್ರಕರಣವು ಎನ್ ಇ ಪಿ ಎಸ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣವಾಗಿರುತ್ತದೆ. ವಿಸಿ ಮೂಲಕ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣದ ಕುರಿತು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎಲ್ ಆರ್ ಆರ್ ವಕೀಲರಿಂದಃ</u>

ಆರೋಪಿ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು